ಇಂದು ದಿನಾಂಕಃ 18-03-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ NHR ವಕೀಲರಿಂದಃ-

ನಮ್ಮ ಮನೆ ನನ್ನ ತಂದೆ ಹೆಸರಿನಲ್ಲಿದೆ ನಾಲೆಯಿಂದ ನಮ್ಮ ಮನೆ ಎಷ್ಟು ದೂರದಲ್ಲಿ ಇದೆ ಎಂದರೆ ಸಾಕ್ಷಿಯು ಹತ್ತಿಕೊಂಡು ಇದೆ ಎಂದಿದ್ದಾರೆ. ಸದರಿ ನಾಲೆ ಪೂರ್ವದಿಂದ ಪಶ್ಚಿಮಕ್ಕೆ ಬಂದು ದಕ್ಷಿಣ ದಿಕ್ಕಿಗೆ ಹೋಗುತ್ತದೆ. ಸಾಕ್ಷಿ ಮುಂದುವರೆದು ಸದರಿ ನಾಲಾ ಪಶ್ಚಿಮದಿಂದ ಪೂರ್ವಕ್ಕೆ ಬರುತ್ತದೆ ಎಂದು ನುಡಿದಿದ್ದಾರೆ. ಪಶ್ಚಿಮ ದಿಕ್ಕಿನಿಂದ ಬಂದು ನನ್ನ ಅಣ್ಣನ ಮನೆಗೆ ಹತ್ತಿ ನಂತರ ನನ್ನ ಮನೆಗೆ ಹತ್ತಿಕೊಂಡು ದಕ್ಷಿಣಕ್ಕೆ ಹೋಗುತ್ತದೆ. ನನ್ನ ಹಾಗೂ ಪ್ರತಿವಾದಿಯ ಮಧ್ಯದಲ್ಲಿರುವ ನಾಲೆಯು ಸರಕಾರದು ಎಂದು ಪ್ರಶ್ನಿಸಿದಾಗ ಸಾಕ್ಷಿಯು ಅಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಸದರಿ ನಾಲೆ ಮುಂದೆ ಹೋಗಿ ಸರಕಾರದ ನಾಲೆಗೆ ಸೇರುತ್ತದೆ ಎಂದು ನುಡಿಯುತ್ತಾರೆ. ಪಶ್ಚಿಮದಿಂದ ಪೂರ್ವಕ್ಕೆ ನಾಲೆ ಹೋಗಬೇಕಾದರೆ ನನ್ನ ಮನೆಗೆ ಹತ್ತಿಕೊಂಡು ಹೋಗುತ್ತದೆ. ಪಶ್ಚಿಮದಿಂದ ಪೂರ್ವಕ್ಕೆ ನಾಲೆ ಹೋದಾಗ ನನ್ನ ಮನೆ ಹಾಗೂ ನನ್ನ ಅಣ್ಣನ ಮನೆಗೆ ಹತ್ತಿಕೊಂಡು ಹೋಗುತ್ತದೆ. ನನ್ನ ಮನೆಯ ಬಾಗಿಲು ದಕ್ಷಿಣ ದಿಕ್ಕಿಗೆ ಮುಖವಾಗಿ ಇದೆ. ಸದರಿ ನಾಲೆ ದಕ್ಷಿಣ ದಿಕ್ಕಿಗೆ ಹೋಗಬೇಕಾದರೆ ಸದರಿ ನಾಲೆ 16 ಫೀಟ್ ನಮ್ಮ ಮನೆಗೆ ಹತ್ತಿಕೊಂಡು ಹೋಗುತ್ತದೆ. ಪ್ರತಿವಾದಿರವರ ಮನೆ " L” ಆಕಾರ ಆಗಿರುತ್ತದೆ ಎಂದರೆ ಸರಿ.

ನನ್ನ ಅಣ್ಣನ ಮನೆ ಹಾಗೂ ಪ್ರತಿವಾದಿರವರ ಮನೆ ಮಧ್ಯದಲ್ಲಿ 3 ಫೀಟನ ನಾಲೆ ಇರುತ್ತದೆ ಎಂದರೆ ಸರಿ. ನಮ್ಮ ಅಣ್ಣನ ಮನೆಗೆ ನಾಲೆ ಹತ್ತಿಕೊಂಡು ಬಂದು ನಂತರ ನನ್ನ ಮನೆಗೆ ಹತ್ತಿಕೊಂಡು ಮುಂದೆ ಹೋಗುತ್ತದೆ ಎಂದರೆ ಸರಿ. ಪ್ರತಿವಾದಿರವರ ಮನೆಯ ಬಾಗಿಲು ಪೂರ್ವಕ್ಕೆ ದಿಕ್ಕಿಗೆ ಮುಖವಾಗಿ ಇರುತ್ತದೆ ಎಂದರೆ ಸರಿ. ಪ್ರತಿವಾದಿರವರ ಮನೆಯ ಪೂರ್ವಕ್ಕೆ ಸರಕಾರಿ ನಾಲೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆ ಹಾಗೂ ನಾಲೆಯ ಮಧ್ಯದಲ್ಲಿ 16 ಫೀಟ್ ಅಂತರ ಇರುತ್ತದೆ ಎಂದರೆ ಸರಿಯಲ್ಲ. ನಾಲೆಯ ಸ್ಥಳ ನಮಗೆ ಯಾವದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾಲೆಯ ಸ್ಥಳದಲ್ಲಿ ಸರಕಾರ ಗೋಮಾಳ ಸ್ಥಳ ಇರುತ್ತದೆ ಎಂದರೆ ಸರಿಯಲ್ಲ. ನಾಲೆಯ ಸ್ಥಳ ಸರಕಾರದ ಸ್ಥಳ ಎಂದರೆ ಸರಿಯಲ್ಲ. ನಾಲೆಯ ಸ್ಥಳ ನಿಮ್ಮದ ಎಂದು ಪ್ರಶ್ನಿಸಿದಾಗ ಸಾಕ್ಷಿ ಒಂದುವರೆ ಫೀಟ್ ನಾನು ಬಿಟ್ಟಿದ್ದೇನೆ ಎಂದು ನುಡಿಯುತ್ತಾರೆ.

ನಿಮ್ಮ ಸ್ಥಳದ ವಿಸ್ತೀರ್ಣ ಎಷ್ಟು ಎಂದು ಪ್ರಶ್ನಿಸಿದಾಗ ಉತ್ತರದಿಂದ ದಕ್ಷಿಣಕ್ಕೆ 80 ಫೀಟ್ ಮತ್ತು ಇನ್ನೊಂದು ಕಡೆ 96 ಫೀಟ್ ಪೂರ್ವದಿಂದ ಪಶ್ಚಿಮಕ್ಕೆ ಅಂದಾಜು 60 ರಿಂದ 65 ಫೀಟ್ ಒಂದು ಕಡೆಯಲ್ಲಿ ಹಾಗೂ ಇನ್ನೊಂದು ಕಡೆಯಲ್ಲಿ 40 ರಿಂದ 50 ಫೀಟ್ ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಸ್ಥಳ ನಿಮಗೆ ಹೇಗೆ ಬಂದು ಎಂದು ಪ್ರಶ್ನಿಸಿದಾಗ ನನ್ನ ಅಜ್ಜನಿಂದ ನನ್ನ ತಂದೆಗೆ ಹಾಗೂ ನನ್ನ ತಂದೆಯಿಂದ ನನಗೆ ಬಂದಿದೆ ಎಂದು ನುಡಿಯುತ್ತಾರೆ. ನಮ್ಮ ಸ್ಥಳದಲ್ಲಿ ಒಂದುವರೆ ಫೀಟ್ ನಾಲೆಗೆ ಬಿಟ್ಟಿರುವ ಬಗ್ಗೆ ಯಾವದಾದರೂ ದಾಖಲೆ ಹಾಕಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿಯು ನ್ಯಾಯಾಲಯದ ಡಿಕ್ರಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಡಿಕ್ರಿಯಲ್ಲಿ ನಾನು ಒಂದುವರೆ ಫೀಟ್ ನಾಲೆಗೆ ಬಿಟ್ಟಿರುವ ಬಗ್ಗೆ ಬರೆದಿಲ್ಲ ಎಂದರೆ ಸರಿ.

ನಮ್ಮ ಊರಿನಲ್ಲಿರುವ ಎಲ್ಲ ನಾಲೆಗಳು ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುತ್ತವೆ ಎಂದರೆ ಸಾಕ್ಷಿಯು ರಸ್ತೆಯ ಪಕ್ಕದಲ್ಲಿರುವ ನಾಲೆಗಳು ಮಾತ್ರ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುತ್ತವೆ ಹಾಗೂ ಉಳಿದ ಎರಡು ಸ್ವತ್ತುಗಳ ಮಧ್ಯ ಇರುವ ನಾಲೆಗಳು ಅವರವರ ಸ್ವಾಧೀನದಲ್ಲೆ ಇರುತ್ತವೆ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯತನ ಸಿಬ್ಬಂದಿ ನಮ್ಮ ಊರಿನಲ್ಲಿರುವ ನಾಲೆಗಳು ಸ್ವಚ್ಛಪಡಿಸುತ್ತಾರೆ ಎಂದರೆ ಸಾಕ್ಷಿಯು ರಸ್ತೆಯ ಪಕ್ಕದಲ್ಲಿರುವ ನಾಲೆಗಳು ಮಾತ್ರ ಸ್ವಚ್ಛ ಮಾಡುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನ ಎಲ್ಲ ನಾಲೆಗಳು ಸರಕಾರದವರು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎರಡು ಸ್ವತ್ತುಗಳ ಮಧ್ಯದಲ್ಲಿರುವ ನಾಲೆ ಅವರವರೆ ನಿರ್ಮಾಣ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯ ಮೇಟ್ಟಿಲುಗಳ ಕೆಳಗೆ ಇರುವ ನಾಲೆ ಸರಕಾರದ ನಾಲೆ ಹಾಗೂ ನನಗೆ ಯಾವದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾಲೆಯ ಸ್ಥಳ ಸರಕಾರದು ಆಗಿದ್ದು ಹಾಗೂ ನಾನು 10 ರಿಂದ 20 ಫೀಟ್ ಸರಕಾರದ ಜಮೀನನ್ನು ಕಬ್ಜೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿರುವ ವಿಸ್ತೀರ್ಣದ ನಮ್ಮ ಮನೆಯ ಯಾವದೆ ದಾಖಲೆ ಇದೆಯಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಮ್ಮ ದೊಡ್ಡಪ್ಪನ ಮನೆಯ ದಾಖಲೆ ಇರುತ್ತದೆ ಹಾಗೂ ನಮ್ಮ ಮನೆಯ ದಾಖಲೆ ನ್ಯಾಯಾಲಯದ ಡಿಕ್ರಿ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ವಿಸ್ತೀರ್ಣದ ಬಗ್ಗೆ ಡಿಕ್ರಿಯಲ್ಲಿ ಉಲ್ಲೇಖ ಇದೆಯಾ ಎಂದು

ಪ್ರಶ್ನಿಸಿದಾಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾವು ಸರಕಾರದ ಗೋಮಾಳ ಜಮೀನನ್ನು ಕಬ್ಜೆ ಮಾಡಿಕೊಂಡಿರುವ ಕಾರಣ ನಮ್ಮ ಹತ್ತಿರ ಯಾವದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಾಲೆಯನ್ನು ಯಾವದೇ ರೀತಿಯಾಗಿ ಕಬ್ಜೆ ಮಾಡಿಲ್ಲ ಹಾಗೂ ಪ್ರತಿವಾದಿ ದೊಡ್ಡ ಮನೆ ಕಟ್ಟಿದ ಕಾರಣ ನಾನು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ತಮ್ಮ ಜಮೀನಿನಲ್ಲಿ ಪೂರ್ವ ಪಶ್ಚಿಮಕ್ಕೆ 56 ಫೀಟನಲ್ಲಿ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿ. ಪ್ರತಿವಾದಿ ತಮ್ಮ ಕಟ್ಟುವ ಕಾರಣಕ್ಕಾಗಿ ಗ್ರಾಮ ಪಂಚಾಯತಿಯಿಂದ ಪರವಾನಿಗೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ನಾಲೆ ಗ್ರಾಮ ಪಂಚಾಯತರವರ ವ್ಯಾಪ್ತಿಯಲ್ಲಿ ಬರುವ ಕಾರಣ ಗ್ರಾಮ ಪಂಚಾಯತ ಅಧಿಕಾರಿಗಳನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಬೇಕು ಎಂದರೆ ಸಾಕ್ಷಿ ಸದರಿ ನಾಲೆ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವುದಿಲ್ಲ ಆದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿರವರ ಮನೆಯ ಪಕ್ಕದಲ್ಲಿ ನಾಲೆ ಇದ್ದು ಅದರ ಪಶ್ಚಿಮಕ್ಕೆ ನಮ್ಮ ಅಣ್ಣನ ಮನೆ ಇರುತ್ತದೆ ಮತ್ತು ಅದರ ಪಕ್ಕದಲ್ಲಿ ನನ್ನ ಮನೆ ಇರುತ್ತದೆ. ನಮ್ಮ ಮನೆಯ ಮುಂದೆ 16 ಫೀಟ್ ಅಂಗಳ ಜಾಗ ಇರುತ್ತದೆ. ಸದರಿ ಅಂಗಳ ಉತ್ತದಿಂದ ದಕ್ಷಿಣಕ್ಕೆ ನೇರವಾಗಿ ಇದೆ ಎಂದರೆ ಸರಿ. ಸದರಿ ನಾಲೆಯಿಂದ ಎಷ್ಟು ಅಂತರದಲ್ಲಿ ನಮ್ಮ ಅಣ್ಣನ ಮನೆ ಇದೆ ಎಂದರೆ ಸಾಕ್ಷಿಯು ಅಳತೆ ಮಾಡಿನೋಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಣ್ಣನ ಮನೆ ಪೂರ್ವ ಪಶ್ಚಿಮಕ್ಕೆ ಎಷ್ಟು ಇರುತ್ತದೆ ಎಂದರೆ ನಾನು ಅಳತೆ ಮಾಡಿಲ್ಲ ಎಂದು ನುಡಿಯುತ್ತಾರೆ. ಪೂರ್ವದಿಂದ ಪಶ್ಚಿಮಕ್ಕೆ ಪ್ರತಿವಾದಿರವರ ಮನೆ ಹಾಗೂ ನನ್ನ ಮನೆ ಎಷ್ಟು ವಿಸ್ತೀರ್ಣದಲ್ಲಿ ಹತ್ತಿಕೊಂಡು ಇದೆ ಎಂದರೆ ಸಾಕ್ಷಿ ನಾನು ಅಳತೆ ಮಾಡಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿರವರ ಮನೆಯ ಮುಂದೆ ನಮ್ಮ ಮನೆ ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿರವರು ಕಟ್ಟಿರುವ ಮೆಟ್ಟಿಲ ಎದುರುಗಡೆ ನಮ್ಮ ಮನೆ ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿರವರು ಮೆಟ್ಟಿಲನ್ನು ನಮ್ಮ ಸ್ಥಳದಲ್ಲಿ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮನೆಯ ಉತ್ತರ-ದಕ್ಷಿಣಕ್ಕೆ ನಾಲೆ ಹರಿಯುತ್ತದೆ ಎಂದರೆ ಸರಿ. ಪೂರ್ವದಿಂದ ಪಶ್ಚಿಮಕ್ಕೆ ನಾಲೆ ಹರಿದು ನಂತರ ಪ್ರತಿವಾದಿರವರ ಮನೆ ಗೋಡೆಯಿಂದ ತಲುಪಿ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ ಎಂದರೆ ಸರಿ. ಆದ್ದರಿಂದ ನಾಲೆಗೆ ಹಾಗೂ ನಮಗೆ ಯಾವದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನಾಲೆಯನ್ನು ಯಾವದೇ ರೀತಿ ಕಬ್ಜೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿರವರು ನಾಲೆಯನ್ನು ಕಬ್ಜೆ ಮಾಡಿ ಮೆಟ್ಟಿಲು ಕಟ್ಟಿ ಅಧಿಕಾರಿಗಳಿಂದ ದಾಖಲೆಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಗ್ರಾಮ ಪಂಚಾಯತರವರಿಗೆ ನೀಡಿರುವ ದೂರನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯ ಶಫಥ ಪತ್ರದಲ್ಲಿರುವ ಸಂಗತಿಗಳೆಲ್ಲ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**